ಈ) ಮತ್ತು ಉ) ಗಮನಿಸಿದೆ. ಅನುದಾನದ ಲಭ್ಯತೆ ಮೇರೆಗೆ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುತ್ತದೆ.

865 (1408) ಶ್ರೀ ರಮೇಶ್‌ಕುಮಾರ್ ಕೆ. ಆರ್. (ಶ್ರೀನಿವಾಸಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಲೋಕೋಪಯೋಗಿ ಇಲಾಖೆ ರಸ್ತೆಗಳು ಈ ಮೂರನ್ನು ಹೊರತುಪಡಿಸಿ, ಜಿಲ್ಲಾ ಪಂಚಾಯತಿ ಮತ್ತು ಪಂಚಾಯತಿ ವ್ಯಾಪ್ತಿಯಲ್ಲಿ ಬರತಕ್ಕಂತಹ ರಸ್ತೆಗಳ ಉದ್ದ ಎಷ್ಟು;

ಆ) ರೈತರ ಉತ್ಪಾದನೆ ಮಾರುಕಟ್ಟೆ ತಲುಪಲು ಈ ರಸ್ತೆಯ ಅಗತ್ಯತೆ ಇರುವುದು ನಿಜವಲ್ಲವೆ;

ಇ) ಹಾಲಿ ಜಿಲ್ಲಾ ಪಂಚಾಯತ್‌ನಿಂದ ರಸ್ತೆಗಳ ಸುಧಾರಣೆಗಳಿಗೆ ಮೀಸಲಿಟ್ಟಿರುವ ಹಣವೆಷ್ಟು?

ಶ್ರೀ ಸಿ. ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಶ್ರೀನಿವಾಸಪುರ ತಾಲ್ಲೂಕಿನ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ರಸ್ತೆ ಉದ್ದ 606.35 ಕಿ.ಮೀ.ಗಳು

ಆ) ಹೌದು.

ಇ) ಪ್ರಸಕ್ತ ಸಾಲಿನಲ್ಲಿ ಶ್ರೀನಿವಾಸಪುರ ತಾಲ್ಲೂಕಿನ ರಸ್ತೆಗಳ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಅನುದಾನವನ್ನು ಕೆಳಕಂಡ ಯೋಜನೆಗಳಲ್ಲಿ ಒದಗಿಸಲಾಗಿದೆ.

ಕ್ರ. ಸಂ.	ಯೋಜನೆ	ಅನುದಾನ (ರೂ. ಲಕ್ಷಗಳಲ್ಲಿ)
1	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ	42.78
2	5054	7.08
3	12ನೇ ಹಣಕಾಸು ಆಯೋಗ	74.72
4	ನಬಾರ್ಡ್-X	13.00
5	ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆ (ಎಸ್.ಜಿ.ಆರ್.ವೈ)	17.55

868 (1245) ಶ್ರೀ ರವಿ. ಸಿ. ಟಿ. (ಚಿಕ್ಕಮಗಳೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವಸತಿರಹಿತರ ಸಂಖ್ಯೆ ಎಷ್ಟು; ಕ್ಷೇತ್ರವಾರು ವಿವರ ಒದಗಿಸುವುದು;

ಆ) ವಸತಿ ನಿರ್ಮಾಣಕ್ಕೆ ಈ ಸಾಲಿನಲ್ಲಿ ಹೊಂದಿರುವ ಗುರಿ ಎಷ್ಟು; ಕ್ಷೇತ್ರವಾರು ವಿವರ ಒದಗಿಸುವುದು;

ಇ) ನಗರ ಆಶ್ರಯ ಸಮಿತಿಯ ರಚನೆಗೆ ಸರ್ಕಾರದ ಕ್ರಮಗಳೇನು; ವಿವರ ನೀಡುವುದು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿ ವಸತಿ ಹೀನರ ಸಮೀಕ್ಷೆಯನ್ನು ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿಗಳ ಮೂಲಕ ಹಾಗೂ ನಗರ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಕ 2003ನೇ ಸಾಲಿನ ಮೇ ರಿಂದ ಜೂನ್ ತಿಂಗಳಲ್ಲಿ ನಡೆಸಲಾಗಿರುತ್ತದೆ.

ಈ ವರದಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಈ ಕೆಳಕಂಡಂತೆ ವಸತಿ ರಹಿತರು ಮತ್ತು ನಿವೇಶನ ರಹಿತರು ಇರುತ್ತಾರೆ.

ವಿವರ	ಗ್ರಾಮೀಣ	ನಗರ	ಒಟ್ಟು
ವಸತಿ ರಹಿತರು	1226345	73444	1299789
ನಿವೇಶನ ರಹಿತರು	1042986	255827	1298813
ಒಟ್ಟು	**2269331**	**329271**	**2598602**

ತಾಲ್ಲೂಕುವಾರು ವಿವರ ಅನುಬಂಧ "ಅ" ದಲ್ಲಿ ಮತ್ತು ಪಟ್ಟಣವಾರು ವಿವರ ಅನುಬಂಧ "ಆ" ದಲ್ಲಿ ನೀಡಲಾಗಿದೆ. (ಸದಸ್ಯರಿಗೆ ಮಾತ್ರ)

ಆ) ಈ ಸಾಲಿಗೆ (2006–07) ಇಂದಿರಾ ಆವಾಸ್ ಯೋಜನೆಯಡಿ ರಾಜ್ಯಕ್ಕೆ 53,299 ಮನೆಗಳ ಗುರಿಯನ್ನು ಹೊಂದಲಾಗಿದೆ.

ಇತರೆ ಯೋಜನೆಯಡಿಯಲ್ಲಿ 2006–07ರಲ್ಲಿ ಹೊಸ ಗುರಿಯನ್ನು ಸರಕಾರ ನೀಡಿರುವುದಿಲ್ಲ.

2005–06ನೇ ಸಾಲಿನಲ್ಲಿ ಒಟ್ಟು 3,00,020 (ಗ್ರಾಮೀಣ ಆಶ್ರಯ – 226080, ಗ್ರಾಮೀಣ ಅಂಬೇಡ್ಕರ್ – 24040 ಮತ್ತು ನಗರ ಆಶ್ರಯ – 50000) ಮನೆಗಳ ಗುರಿಯನ್ನು ಹೊಂದಿದ್ದು, 2006–07ರಲ್ಲಿ ಈ ಮನೆಗಳ ಮತ್ತು ಹಿಂದಿನ ಬ್ಯಾಕ್‌ಲಾಗ್ ಸೇರಿದಂತೆ ಒಟ್ಟು 3,00,000 ಮನೆಗಳನ್ನು ಪೂರ್ಣಗೊಳಿಸುವ ಗುರಿಯನ್ನು ಉದ್ದೇಶಿಸಲಾಗಿದೆ. ವಿವರ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಯೋಜನೆ	ಪೂರ್ಣಗೊಳಿಸಲು ಉದ್ದೇಶಿಸಲಾಗಿರುವ ಮನೆಗಳ ಸಂಖ್ಯೆ
1	ಗ್ರಾಮೀಣ ಆಶ್ರಯ	2,00,000
2	ಗ್ರಾಮೀಣ ಅಂಬೇಡ್ಕರ್	20.000
3	ನಗರ ಆಶ್ರಯ	30,000
4	ಇಂದಿರಾ ಆವಾಸ್	50,000
	ಒಟ್ಟು	3,00,000

ತಾಲ್ಲೂಕುವಾರು ವಿವರ ಅನುಬಂಧ " ಇ" ದಲ್ಲಿ ನೀಡಲಾಗಿದೆ. (ಸದಸ್ಯರಿಗೆ ಮಾತ್ರ)

ಇ) ನಗರ ಆಶ್ರಯ ಸಮಿತಿಗಳನ್ನು ಸರ್ಕಾರವು ಈಗಾಗಲೇ ರಚಿಸುತ್ತಿದ್ದು. ಈವರೆಗೆ ಈ ಕೆಳಕಂಡ ನಗರ ಆಶ್ರಯ ಸಮಿತಿಗಳನ್ನು ರಚಿಸಲಾಗಿದೆ.

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಪಟ್ಟಣ
1	ಕೊಡಗು	ಮಡಿಕೇರಿ	ಮಡಿಕೇರಿ
2	ಗದಗ	ನರಗುಂದ	ನರಗುಂದ
3	ಬೀದರ್	ಬಸವಕಲ್ಯಾಣ	ಬಸವಕಲ್ಯಾಣ
4	ಕೊಪ್ಪಳ	ಗಂಗಾವತಿ	ಗಂಗಾವತಿ
5	ಮೈಸೂರು	ಹೆಚ್.ಡಿ.ಕೋಟೆ	ಹೆಚ್.ಡಿ.ಕೋಟೆ
6	ಮೈಸೂರು	ಹೆಚ್.ಡಿ.ಕೋಟೆ	ಸರಗೂರು
7	ಬಿಜಾಪುರ	ಸಿಂಧಗಿ	ಸಿಂಧಗಿ
8	ಹಾವೇರಿ	ಹಿರೇಕೆರೂರು	ಹಿರೇಕೆರೂರು
9	ಬೆಳಗಾವಿ	ರಾಮದುರ್ಗ	ರಾಮದುರ್ಗ
10	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ
11	ತುಮಕೂರು	ಶಿರಾ	ಶಿರಾ
12	ಬಾಗಲಕೋಟೆ	ಬೀಳಗಿ	ಬೀಳಗಿ
13	ಹಾವೇರಿ	ಹಾನಗಲ್	ಹಾನಗಲ್
14	ಬಾಗಲಕೋಟೆ	ತೆರದಾಳ	ತೆರೆದಾಳ
15	ಬಾಗಲಕೋಟೆ	ರಬಕವಿ ಬನಹಟ್ಟಿ	ರಬಕವಿ ಬನಹಟ್ಟಿ
16	ಗುಲ್ಬರ್ಗಾ	ಅಪ್‌ಜಲ್ ಪುರ	ಅಪ್‌ಜಲ್ ಪುರ

17	ಹಾಸನ	ಅರಸೀಕರೆ	ಅರಸೀಕೆರೆ
18	ಹಾವೇರಿ	ಶಿಗ್ಗಾಂವ	ಶಿಗ್ಗಾಂವ
19	ರಾಯಚೂರು	ರಾಯಚೂರು	ರಾಯಚೂರು
20	ಗುಲ್ಬರ್ಗಾ	ಚಿತ್ತಾಪುರ	ಚಿತ್ತಾಪುರ
21	ಉತ್ತರ ಕನ್ನಡ	ಶಿರಸಿ	ಶಿರಸಿ
22	ಗದಗ್	ಗಜೇಂದ್ರಗಡ	ಗಜೇಂದ್ರಗಡ
23	ಮೈಸೂರು	ಮೈಸೂರು	ಮೈಸೂರು
24	ಮೈಸೂರು	ಟಿ. ನರಸೀಪುರ	ಬನ್ನೂರು
25	ಹಾವೇರಿ	ರಾಣಿ ಬೆನ್ನೂರು	ರಾಣಿ ಬೆನ್ನೂರು
26	ಉತ್ತರ ಕನ್ನಡ	ಸಿದ್ದಾಪುರ	ಸಿದ್ದಾಪುರ
27	ಗುಲ್ಬರ್ಗಾ	ವಾಡಿ	ವಾಡಿ

869 (1186) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜೀವ್ ಗಾಂಧಿ ವಸತಿ ಯೋಜನೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳೇನು (ಬಿ.ಪಿ.ಎಲ್) ಸರ್ವೆಯ ಮಾರ್ಗಸೂಚಿಗಳೇನು)

ಆ) ಈ ನಿಯಮದಂತೆ 14 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯಬಾರದೆಂದು ಕಡ್ಡಾಯ ಮಾಡಲಾಗಿದೆಯೇ;

ಇ) ಹಾಗಿದ್ದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫಲಾನುಭವಿಗಳು ಲಭ್ಯವಾಗುವುದಿಲ್ಲವೆಂಬ ಅಂಶ ಸರ್ಕಾರದ ಗಮನದಲ್ಲಿದೆಯೇ;

ಈ) ಆಯ್ಕೆ ಮಾನದಂಡಗಳನ್ನು ಪೂರೈಸಿದ ನಂತರ ಅಂಕ ಜಾಸ್ತಿ ಎಂಬ ಕಾರಣಕ್ಕೆ ಫಲಾನುಭವಿಗಳ ಯೋಜನೆ ಲಾಭವನ್ನು ನೀಡದಿದ್ದಲ್ಲಿ ಇವರುಗಳಿಗೆ ಬದಲಿ ವ್ಯವಸ್ಥೆ ಏನು;

ಉ) ಈ ನಿಟ್ಟಿನಲ್ಲಿ ಫಲಾನನುಭವಿಗಳ ಪಟ್ಟಿಯನ್ನು ರದ್ದುಪಡಿಸಲು ಸರ್ಕಾರ ನಿರ್ಧರಿಸಿದೆಯೇ;

ಊ) ಹಾಗಿದ್ದಲ್ಲಿ, ಸರ್ಕಾರದ ಮುಂದಿನ ಕ್ರಮಗಳೇನು ; ಈ ಗೊಂದಲಗಳಿಗೆ ಕಾರಣಗಳೇನು ; ವಿವರ ನೀಡುವುದು?